## ಜಿಲ್ಲಾಧಿಕಾರಿ ಹಾಗೂ ಗ್ರಾಮ ಲೆಕ್ಕಾಧಿಕಾರಿ ನೇರ ನೇಮಕಾತಿ ಪ್ರಾಧಿಕಾರ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

**ನಂ. ಸಿಬ್ಬಂದಿ (1) ಎಪಿಪಿ ಸಿ.ಆರ್ 31/2019-20, ದಿನಾಂಕಃ 09-03-2020**

### // ಪ್ರಕಟಣೆ//

ಶಿವಮೊಗ್ಗ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಖಾಲಿ ಹುದ್ದೆಗಳ ನೇರ ನೇಮಕಾತಿಗೆ ದಿನಾಂಕಃ 16-01-2020ರಂದು ಪ್ರಕಟಿಸಲಾದ ಅಧಿಸೂಚನೆಯನ್ವಯ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ರೀತಿಯಾಗಿ ಆಹ್ವಾನಿಸಿ ಸಲ್ಲಿಕೆಯಾದ ಅರ್ಜಿಗಳಲ್ಲಿ ಮೆರಿಟ್ ಆಧಾರದ ಮೇಲೆ 1:10 ಪ್ರಮಾಣದಲ್ಲಿ ಪರಿಶೀಲನಾ ಪಟ್ಟಿಯನ್ನು https://shivamogga.nic.in ವೆಬ್ ಸೈಟ್ ಮೂಲಕ ಪ್ರಕಟಿಸಲಾಗಿದೆ. ಈ ಪರಿಶೀಲನಾ ಪಟ್ಟಿಯಲ್ಲಿ ಸೆಟ್-1 ರಲ್ಲಿ ಹೆಸರು ಇರುವ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಪ್ರಥಮ ಆದ್ಯತೆ ಇರುತ್ತದೆ. ಈ ಪಟ್ಟಿಯಲ್ಲಿ ಇರುವವರು ದಾಖಲೆಗಳ ಪರಿಶೀಲನೆಗೆ ವಿಫಲರಾದಲ್ಲಿ ಸೆಟ್-2 ರ ಅಭ್ಯರ್ಥಿಗಳಿಗೆ ನಂತರದ ಆದ್ಯತೆ ನೀಡಲಾಗುವುದು. ಇದೇ ರೀತಿ ಸೆಟ್-10 ರವರೆಗೆ ಆಯ್ಕೆಯಲ್ಲಿ ಆದ್ಯತೆ ನೀಡಲಾಗುವುದು. ಈ ಪ್ರಕಟಣೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ತಕರಾರುಗಳನ್ನು ದಿನಾಂಕಃ 19-03-2020ರೊಳಗೆ shimogava2020@gmail.com ಇ-ಮೇಲ್ ಮುಖಾಂತರ ಸಲ್ಲಿಸಲು ಅವಕಾಶವಿರುತ್ತದೆ.

ದಿನಾಂಕಃ 23-03-2020ರಂದು ಶಿವಮೊಗ್ಗ ಉಪವಿಭಾಗಾಧಿಕಾರಿಗಳ ಕಛೇರಿ ಸಂಕೀರ್ಣದ ಮೂರನೇ ಮಹಡಿಯಲ್ಲಿ ಅಭ್ಯರ್ಥಿಗಳು ಈ ಪ್ರಕಟಣೆಗೆ ಲಗತ್ತಿಸಿದ ಅನುಬಂಧದಂತೆ ದಾಖಲಾತಿಗಳನ್ನು ಜೋಡಿಸಿಕೊಂಡು ಪರಿಶೀಲನೆಗೆ ಹಾಜರಾಗಲು ತಿಳಿಸಲಾಗಿದೆ. ಈ ದಿನಾಂಕದ ನಂತರದಲ್ಲಿ ಅಭ್ಯರ್ಥಿಯು ಹಾಜರುಪಡಿಸಿದ ಯಾವುದೇ ದಾಖಲೆಗಳನ್ನು ಪರಿಶೀಲನೆಗೆ ಪರಿಗಣಿಸಲಾಗುವುದಿಲ್ಲ. ಈ ಪಟ್ಟಿಯು ಕೇವಲ ಪರಿಶೀಲನಾ ಪಟ್ಟಿಯಾಗಿದ್ದು, ಆಯ್ಕೆ ಪಟ್ಟಿಯಾಗಿರುವುದಿಲ್ಲ.

ಈ ಪ್ರಕಟಣೆಯೊಂದಿಗೆ Cutoff For Verification List ಮತ್ತು ದಾಖಲಾತಿಗಳ ಪರಿಶೀಲನೆಗೆ ನಿಗಧಿಪಡಿಸಿದ ಅನುಬಂಧ ಮತ್ತು 1:10 ಪ್ರಮಾಣದ ವರ್ಗವಾರು ಅಭ್ಯರ್ಥಿಗಳ ಪಟ್ಟಿಯನ್ನು ಲಗತ್ತಿಸಿ ಪ್ರಚುರಪಡಿಸಿದೆ.

**ವಿಶೇಷ ಸೂಚನೆಃ- ನೇಮಕಾತಿ Merit cum Roaster ಆಧಾರದ ಮೇರೆಗೆ ಮಾತ್ರ ಪಾರದರ್ಶಕ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುವ ಕಾರಣ ಯಾವುದೇ ಅಭ್ಯರ್ಥಿಯು ಹಣ / ಶಿಫಾರಸ್ಸು/ಮಧ್ಯವರ್ತಿಗಳಿಂದ ಮೋಸ ಹೋಗಬಾರ ದಾಗಿ ಸಹ ತಿಳಿಸಿದೆ.**

K. B. [signature]

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು,
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಸಮಿತಿ
ಶಿವಮೊಗ್ಗ ಜಿಲ್ಲೆ,ಶಿವಮೊಗ್ಗ.

9/3/2020

: ಅನುಬಂಧಃ

ವಿಶೇಷ ಸೂಚನೆಃ- ನೇಮಕಾತಿ **Merrit cum Roaster** ಆಧಾರದ ಮೇರೆಗೆ ಮಾತ್ರ ಪಾರದರ್ಶಕ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುವ ಕಾರಣ ಯಾವುದೇ ಅಭ್ಯರ್ಥಿಯು ಪರಿಶೀಲನಾ ಸಮಯದಲ್ಲಿ ಅಭ್ಯರ್ಥಿಗಳು ಹಾಜರುಪಡಿಸಬೇಕಾದ ದಾಖಲೆಗಳ ವಿವರಗಳು.

1. ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಣಗೊಂಡ ಇತ್ತೀಚಿನ 04 ಭಾವಚಿತ್ರಗಳು.
2. ಆನ್ ಲೈನ್ (Online) ಮೂಲಕ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಒಂದು ಸೆಟ್ ದೃಢೀಕೃತ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು. ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ಸ್ವೀಕೃತಿ ಪತ್ರ (Acknowledgement) ಪಾವತಿ ಹಾಗೂ ಹಣ ತುಂಬಿದ ಬಗ್ಗೆ ಡೌನ್ ಲೋಡ್ ಮಾಡಿದ ಪ್ರತಿಯನ್ನು ಹಾಜರುಪಡಿಸಬೇಕು.
3. ದೃಢೀಕರಿಸಿದ ದ್ವಿತೀಯ ಪಿ.ಯು.ಸಿ ಅಥವಾ 12ನೇ ತರಗತಿ, ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (CBSE) ಅಥವಾ ಐ.ಸಿ.ಎಸ್.ಇ ಪರೀಕ್ಷೆ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.ಈ ಪರಿಶೀಲನಾ ಸಮಯದಲ್ಲಿ Orignal ಪ್ರಮಾಣ ಪತ್ರಗಳನ್ನು ತರಬೇಕು.
4. ವಯಸ್ಸಿನ ಬಗ್ಗೆ ದೃಢೀಕರಿಸಿದ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಮಾಣ ಪತ್ರವನ್ನು ಪರಿಶೀಲನೆಗೆ ಹಾಜರುಪಡಿಸಬೇಕು.
5. ಜಾತಿಯ ಬಗ್ಗೆ ಮೀಸಲಾತಿ ಬಯಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದು ದೃಢೀಕರಿಸಿದ ಪ್ರಮಾಣ ಪತ್ರ ಹಾಜರು ಪಡಿಸಬೇಕು. ಪರಿಶೀಲನೆ ಸಮಯದಲ್ಲಿ Orignal ಪ್ರಮಾಣ ಪತ್ರಗಳನ್ನು ತರಬೇಕು.
6. ಗ್ರಾಮೀಣ ಮೀಸಲಾತಿಯನ್ನು ಬಯಸುವ ಅಭ್ಯರ್ಥಿಗಳು ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ವ್ಯಾಸಂಗ ಮಾಡಿದ ಬಗ್ಗೆ ನಿಗದಿತ ನಮೂನೆಯಲ್ಲಿ ದೃಢೀಕರಿಸಿರುವ ಪ್ರಮಾಣ ಪತ್ರ ಹಾಜರುಪಡಿಸಬೇಕು. ಪರಿಶೀಲನೆ ಸಮಯದಲ್ಲಿ Orignal ಪ್ರಮಾಣ ಪತ್ರಗಳನ್ನು ತರಬೇಕು
7. ಅಂಗವಿಕಲರ ಮೀಸಲಾತಿ ಅಡಿಯಲ್ಲಿ ನೇಮಕಾತಿ ಬಯಸುವ ಅಭ್ಯರ್ಥಿಯು ಶ್ರವಣ ದೋಷ ಹೊಂದಿರುವವರು, ಕುಷ್ಠರೋಗದಿಂದ ಹಾಗೂ ಮಾನಸಿಕ ಅಸ್ವಸ್ಥತೆಯಿಂದ ಗುಣಮುಖ ಹೊಂದಿದವರು ಮತ್ತು ದೈಹಿಕ ಅಂಗವಿಕಲತೆ ಇರುವವರು ಮಾತ್ರ ಈ ಮೀಸಲಾತಿ ಅಡಿಯಲ್ಲಿ ನೇಮಕಾತಿಗೆ ಪರಿಗಣಿಸಲಾಗುವುದರಿಂದ ಈ ಬಗ್ಗೆ ನಿಗಧಿತ ನಮೂನೆಯಲ್ಲಿ ಸಕ್ಷಮ ಮೆಡಿಕಲ್ ಬೋರ್ಡ್ ನಿಂದ ಪಡೆದ ದೃಢೀಕರಿಸಿದ ಪ್ರಮಾಣ ಪತ್ರ ಹಾಜರುಪಡಿಸಬೇಕು. ಪರಿಶೀಲನೆ ಸಮಯದಲ್ಲಿ Orignal ಪ್ರಮಾಣ ಪತ್ರಗಳನ್ನು ತರಬೇಕು
8. ಮಾಜಿ ಸೈನಿಕ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗ್ಗೆ ಮೂಲ ಹಾಗೂ ದೃಢೀಕರಿಸಿದ ಪ್ರಮಾಣ ಪತ್ರ ಹಾಜರುಪಡಿಸಬೇಕು.
9. ಯೋಜನಾ ನಿರಾಶ್ರಿತ ಮೀಸಲಾತಿ ಬಯಸುವ ಅಭ್ಯರ್ಥಿಗಳು, ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು. ಪರಿಶೀಲನೆ ಸಮಯದಲ್ಲಿ Orignal ಪ್ರಮಾಣ ಪತ್ರಗಳನ್ನು ತರಬೇಕು.

K.B.

ಜಿಲ್ಲಾಧಿಕಾರಿ

ಶಿವಮೊಗ್ಗ ಜಿಲ್ಲೆ,ಶಿವಮೊಗ್ಗ

9/3/20